ISSN PRINT 2319 1775 Online 2320 7876

*Research paper* **© 2012 IJFANS. All Rights Reserved,** **UGC CARE Listed ( Group -I) Journal Volume 9, Issu 2, 2002**

# ಪ್ರಗತಿಶೀಲ ಸಾಹಿತ್ಯದ ತಾತ್ವಿಕ ಸ್ವರೂಪ

ಡಾ.ನಾಗರೆಡ್ಡಪ್ಪ ಹೆಚ್
ಉಪನ್ಯಾಸಕರು

.

**ಸರಾಂಶ**

ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟವಾದ ಪ್ರಗತಿಶೀಲ ಘಟ್ಟವೂ ವಿಶಿಷ್ಟವಾದುದು. ನವೋದಯ ಸಾಹಿತ್ಯದ ಇತಿಮಿತಿಗಳಿಗೆ ಉತ್ತರವನ್ನು ಕಂಡುಕೊಂಡ ಪ್ರಗತಿಶೀಲರು ವೈಚಾರಿಕನೆಲೆಯಲ್ಲಿ ತಮ್ಮ ವಿಶಿಷ್ಟತೆಯನ್ನು ಪ್ರಕಟಿಸಿದರು. ಹೊಸತನ್ನು ಕಾಣಿಸುವ ಉದ್ದೇಶದಿಂದ ಆರಂಭದಲ್ಲಿ ಪ್ರಗತಿಶೀಲ ಲೇಖಕರು ಅಭಿವ್ಯಕ್ತಿಯ ಮಾಧ್ಯಮವಾಗಿ ಸಣ್ಣಕಥೆಗಳನ್ನೇ ಆರಿಸಿಕೊಂಡರು. ಮುಂದೆ ಕಾದಂಬರಿಯತ್ತ ಮುಖ ಮಾಡಿದರು. ಸಾಹಿತ್ಯದ ಮೂಲಕ ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆ, ದೌರ್ಜನ್ಯ, ದಬ್ಬಾಳಿಕೆ, ಅನ್ಯಾಯ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ಕಾದಂಬರಿಯ ಮೂಲಕ ಪರಿಚಯಸುತ್ತಾ ಅದರ ವಿರುದ್ಧ ಧ್ವನಿಯೆತ್ತಿ ನಿಲ್ಲುವುದನ್ನು ಕಾಣಬಹುದು. ಅಂತಹ ಅನ್ಯಾಯಗಳಿಗೆ ಪ್ರತಿಭಟನೆಯನ್ನು ಮೈಗೂಡಿಸಿಕೊಳ್ಳಬೇಕೆಂಬ ಅಂಶ ಪ್ರಗತಿಶೀಲರ ಕಾದಂಬರಿಗಳಲ್ಲಿ ಕಂಡು ಬರುತ್ತದೆ. ಇಂತಹ ಅಂಶಗಳು ಸಾರ್ವಕಾಲಿಕವಾಗಿವೆ. ಬಹುಸಂಖ್ಯಾತ ಜನರು ಈವತ್ತಿಗೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

**ಪ್ರಮುಖ ಪದಗಳು** : ಪ್ರಗತಿಶೀಲ ಕಥಾ ಪರಂಪರೆ, ಪ್ರಗತಿಶೀಲರ ದೃಷ್ಟಿಕೋನಗಳು, ಪ್ರಗತಿಶೀಲ ಸಾಹಿತ್ಯ ಕಥನಕ್ರಮ, ಕಾದಂಬರಿಯ ವೈಶಿಷ್ಟ್ಯಯತೆ, ಕಾದಂಬರಿಯಲ್ಲಿ ವೈಚಾರಿಕತೆ

## ಪ್ರಸ್ತಾವನೆ

ಸಾಹಿತ್ಯದಲ್ಲಿ ಪ್ರಗತಿಯ ಪರಿಕಲ್ಪನೆ ಹೆಸರೇ ಸೂಚಿಸುವಂತೆ ಬದಲಾವಣೆಯನ್ನು ತರುವಂತದ್ದು. ಹೊಸತನದ ಹಂಬಲ ಸಾಹಿತ್ಯದ ರೂಪದಲ್ಲಿ ಪಡೆದುಕೊಳ್ಳುತ್ತದೆ. ಪ್ರಗತಿಶೀಲ ಮನೋಭಾವ ಸಾಹಿತ್ಯದಲ್ಲಿ ಹೇಗೆ ಅಂತರ್ಗತಗೊಂಡಿದೆ ಎಂಬುದನ್ನು ಈ ಅಧ್ಯಯನದ ಹಿನ್ನೆಲೆಯಲ್ಲಿ ಮಹತ್ವಪೂರ್ಣವೆನಿಸುತ್ತದೆ. ಇತಿಹಾಸವನ್ನು ಅವಲೋಕಿಸಿದಾಗ ಪ್ರಗತಿ ಎಂಬ ಕ್ರಿಯೆ ನಿರಂತರವಾಗಿ ನಡೆಯುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಜಡ್ಡುಗಟ್ಟಿದ ಸ್ಥಿತಿಯಿಂದ ಎಚ್ಚೆತ್ತು ನವ ಚೇತನವನ್ನು ಪಡೆದು ಹೊಸತನಕ್ಕೆ ನಾಂದಿ ಹಾಡುವುದೇ ಪ್ರಗತಿ. ರಾಜಾಶ್ರಯ ಪಡೆದ ಕವಿಗಳು ಕೃತಿಯನ್ನು ರಾಜನ ಗುಣಗಾನಕ್ಕಾಗಿ ಮೀಸಲಿಟ್ಟಿದ್ದುದನ್ನು ಪ್ರತಿಭಟಿಸುವ ಸಾಹಸವೇ ಪ್ರಗತಿಯ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ಲಕ್ಷಣವಾಗುತ್ತದೆ. ಸಾಹಿತ್ಯ ಮಾರ್ಗವನ್ನು ಬಿಟ್ಟು ದೇಸಿಯತ್ತ ತಿರುಗಿದ್ದು, ಪ್ರಾಸವನ್ನು ತೊರೆದು ನವ್ಯ ಪ್ರಯೋಗವನ್ನು ಕಂಡುಕೊಂಡಿದ್ದು, ಹೊಸ ಶೈಲಿ ದಾಟಿ ಭಾಷೆಗಳನ್ನು ಅಳವಡಿಸಿಕೊಂಡಿದ್ದು ಕೂಡ ಪ್ರಗತಿಯ ಸಂಕೇತವೇ. ಇದು ಜೀವಂತ ಭಾಷೆಯ ಅನಿವಾರ್ಯ ಅಂಗ ಕೂಡ.( ಹು.ರಾ,ಕೋಮಲವಲ್ಲಿ) ನವೋದಯದ ನಂತರ ಬಂದ ಲೇಖಕರು ಪಾಶ್ಚಾತ್ಯರ ಪ್ರೇರಣೆ ಪ್ರಭಾವಕ್ಕೆ ಒಳಗಾಗಿ ತಮ್ಮ ಕೃತಿಗಳಲ್ಲಿ ವಿಶಿಷ್ಟವಾದ ವಸ್ತುವನ್ನು ಆಯ್ಕೆ ಮಾಡಿಕೊಂಡರು. ಮಧ್ಯಮ ವರ್ಗದಿಂದ ಬಂದ ಲೇಖಕರು ಆ ವರ್ಗದ ಹೋರಾಟದ ಬದುಕನ್ನು ಕೌಟುಂಬಿಕ ಸಮಸ್ಯೆಗಳನ್ನು ಚಿತ್ರಿಸಿದರು. ಸಮಾಜದಲ್ಲಿ ನಡೆಯುವ ವಾಸ್ತವ ಘಟನೆಗಳೇ ಸಾಹಿತ್ಯದ ವಸ್ತುಗಳಾದವು. ಅದಕ್ಕೊಂದು ಪರಿಹಾರ ಸೂಚಿಸುವಲ್ಲಿ ಪ್ರಯತ್ನಪಟ್ಟರು. ಜಾತಿ ಸಮಸ್ಯೆ ವೈವಾಹಿಕ ಸಮಸ್ಯೆ, ವಿಷಮ ದಾಂಪತ್ಯ, ಬಡತನ ಇತ್ಯಾದಿ. ಸಾಮಾಜಿಕ ಸಂಘರ್ಷದ ವಸ್ತುಗಳನ್ನು ಕತೆ ಕಾದಂಬರಿಗಳಲ್ಲಿ ಬಿಂಬಿಸತೊಡಗಿದರು. ಪಾಶ್ಚಾತ್ಯ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಲೇಖಕರು ತಮ್ಮನ್ನು ಪ್ರಗತಿಶೀಲ ಲೇಖಕರೆಂದು ಕರೆದುಕೊಂಡರು.

ಪಾಶ್ಚಾತ್ಯ ದೇಶದಲ್ಲಿ ಶ್ರೀಮಂತ ಜನರು ಸಮಾಜದಲ್ಲಿ, ರಾಜ್ಯದಲ್ಲಿ ಪ್ರಭಲರಾಗಿದ್ದು ಬಡವರಿಗೆ ಯಾವುದೇ ಅವಕಾಶಗಳು ಇಲ್ಲದಿದ್ದಾಗ ಬಡವರಿಗೆ ಧ್ವನಿ ತುಂಬುವ ಕೆಲಸ ಪ್ರಗತಿಶೀಲ ಲೇಖಕರದ್ದು. 'ಪ್ರೋಗ್ರೆಸ್ಸೀವ್' ಎಂದು ಕರೆಯುವ ಈ ಬಳಗ ಪ್ರಗತಿಯ ಕಡೆಗೆ ಮುಂದಾದರು. ಪ್ರಗತಿಶೀಲದ ನಿಲುವನ್ನು ವಿಶ್ಲೇಷಿಸಿದ ಮಾಸ್ತಿಯವರು "ನಿಜವಾದ ಪ್ರಗತಿ ಒಂದು ಪಂಗಡಕ್ಕೆ ಮಾತ್ರ ಒಪ್ಪಿಗೆಯಾಗುವುದಿಲ್ಲ, ಅದು ಎಲ್ಲಾ ಪಂಗಡಗಳ ಎಲ್ಲಾ ಜನಾಂಗಗಳ ಒಪ್ಪಿಗೆಯನ್ನು ಸೆಳೆಯುವಂತಿರಬೇಕು".(ಹು.ರಾ,ಕೋಮಲವಲ್ಲಿ) ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ತರುಣ ಲೇಖಕರೆಲ್ಲಾ ಒಗ್ಗೂಡಿದ್ದರಿಂದ ಅದೊಂದು ಚಳುವಳಿಯಾಗಿ ರೂಪುಗೊಂಡಿತು.

ಸಾಹಿತ್ಯ ಪ್ರಕಾರಗಳ ಸ್ವರೂಪವನ್ನು ಖಚಿತವಾಗಿ ಗುರುತಿಸುವಾಗ ಅಲ್ಲಿನ ಜೀವನ ದರ್ಶನ, ದೃಷ್ಟಿಕೋನ ಹಾಗೂ ಗ್ರಹಿಸುವ ರೀತಿ ಮುಖ್ಯವೆನಿಸುತ್ತದೆ. ಪ್ರತಿಯೊಂದು ಸಾಹಿತ್ಯ ಪ್ರಕಾರಕ್ಕೂ ವಿಶಿಷ್ಟವಾದ ಸ್ಥಾಪಿತ ರೂಪಗಳಿರುತ್ತವೆ. ಆದರೆ ಅವುಗಳ ಒಳವಿನ್ಯಾಸಗಳು ಬದಲಾಗುವ ಸಾಧ್ಯತೆಗಳು ಇರುತ್ತವೆ. ಆದ್ದರಿಂದ ಓದುವಿಕೆಯಲ್ಲಿಯೇ ತಾನು ಇಂಥ ಪ್ರಕಾರಕ್ಕೆ ಸೇರಿದ್ದು ಎಂಬ ಒತ್ತಾಯವನ್ನು ಪ್ರತೀ ಪ್ರಕಾರ ಸಹಜವೆಂಬಂತೆ ಹೊಂದಿರುತ್ತದೆ. ಹೇಗೆಂದರೆ ನಾಟಕದಲ್ಲಿ ಸಹಜವೆನಿಸಿದ ಒಂದು ಘಟನೆ ಕಾದಂಬರಿಯಲ್ಲಿ ಅಸಹಜ ಎನಿಸಬಹುದು; ಕಥೆಯಲ್ಲಿ ಅಸಂಗತ ಎನಿಸಬಹುದು. ಮಾರ್ಕ್ಶೋರರ್ ಸಣ್ಣಕಥೆ ಮತ್ತು ಕಾದಂಬರಿ ಪ್ರಕಾರಗಳ ವ್ಯತ್ಯಾಸವನ್ನು ಹೀಗೆ ವಿವರಿಸುತ್ತಾನೆ. "ಸಣ್ಣಕಥೆ ನೈತಿಕ ಅರಿವಿನಲ್ಲಿಯ ಬದಲಾವಣೆ ತೋರಿಸಿದರೆ ಕಾದಂಬರಿ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ನೈತಿಕ ಬದುಕಿನಲ್ಲಿಯ ಬದಲಾವಣೆಯನ್ನು ತೋರಿಸುತ್ತದೆ. ನೈತಿಕ ಅರಿವಿನ ಮೂಲಕವೇ ನೈತಿಕ ಬೆಳವಣಿಗೆ ಸಾಧಿಸಬೇಕು. ಆದರೆ ಅರಿವೇ ಬೆಳವಣಿಗೆಯಲ್ಲ. ಕಾದಂಬರಿ ನೈತಿಕ ಬೆಳವಣಿಗೆಯನ್ನು ಹಂತಹಂತವಾಗಿ, ನಿಧಾನವಾಗಿ ಚಿತ್ರಿಸುತ್ತದೆ. ಆದರೆ ಸಣ್ಣಕಥೆಯಲ್ಲಿ ಈ ಬೆಳವಣಿಗೆಯ ಪ್ರಕ್ರಿಯೆಯನ್ನು ಚಿತ್ರಿಸಲು ಅವಕಾಶವಿಲ್ಲ. ಸಣ್ಣಕಥೆ ಅರಿವಿನಲ್ಲಾಗುವ ಬದಲಾವಣೆಯನ್ನು ಮಿಂಚಿನಂತೆ ಸೂಚಿಸುತ್ತದೆ. ಈ ದೃಷ್ಟಿಯಿಂದಲೇ ಸಣ್ಣಕಥೆ ನೈತಿಕ ಸಾಕ್ಷಾತ್ಕಾರದ ಕಲೆ ಎನಿಸುತ್ತದೆ. ಇವೆರಡೂ ಪ್ರಕಾರ ರಚನೆಯ ದೃಷ್ಟಿಯಿಂದಲೂ ಭಿನ್ನವಾಗುತ್ತವೆ.

ಕಾದಂಬರಿಯ ಮುಖ್ಯಕಥಾವಸ್ತುವಿಗೆ ಸಮನಾಂತರವಾಗಿ ಇಲ್ಲವೇ ವೈದೃಶ್ಯವಾಗಿ ಉಪಕಥಾವಸ್ತು ಬೇಕಾಗುತ್ತದೆ. ಆದರೆ ಸಣ್ಣಕಥೆ ಈ ಗೊಡವೆಗೆ ಹೋಗದೆ ನೈತಿಕ ಸಾಕ್ಷಾತ್ಕಾರವನ್ನು ಒಂದು ಅನಿಸಿಕೆಯಂತೆ ತಟ್ಟನೆ ಮಿಂಚಿಸಿಬಿಡುತ್ತದೆ. ಬೆಳವಣಿಗೆಯ ಅಥವಾ ವಿಕಾಸದ ಪ್ರಕ್ರಿಯೆಯನ್ನು ಊಹೆಗೆ ಬಿಡುತ್ತದೆ. ಅದರ ಶಕ್ತಿ ಇರುವುದು ಈ ಅನಿಸಿಕೆಯ ತೀವ್ರತೆಯಲ್ಲಿ ಮಾತ್ರ. ಆದ್ದರಿಂದ ಸಂಕ್ಷಿಪ್ತತೆಯೇ ಸಣ್ಣಕಥೆಯೊಂದು ಒಳಗೊಂಡಿರಬಹುದಾದ ಜೀವನದರ್ಶನವನ್ನು ಹಾಗೂ ಅದರ ಸ್ವರೂಪವನ್ನು ನಿರ್ಧರಿಸುತ್ತದೆ. ಆದರೆ ಕಾದಂಬರಿ ವಿಸ್ತಾರವಾದ ಜೀವನದರ್ಶನವನ್ನು ತಿಳಿಸುತ್ತದೆ.(ಎಸ್.ಪ್ರಸಾದಸ್ವಾಮಿ,)

ಪ್ರತಿಯೊಂದು ಸೃಜನಶೀಲತೆಗೆ ಹಿನ್ನೆಲೆಯಾಗಿ ಒಂದು ತಾತ್ವಿಕ ನಿಲುವು ಇದ್ದೇ ಇರಬೇಕೆಂಬ ನಿಯಮ ಇಲ್ಲದಿದ್ದರೂ, ಆ ಬಗೆಯ ಕ್ರಿಯೆಯ ಹಿಂದೆ ಒಂದು ಬಗೆಯ ನಿರ್ದಿಷ್ಟ ಧೋರಣೆ ಇದ್ದೇ ಇರುತ್ತದೆ. ಅಂಥ ನಿರ್ಧಾರಗಳನ್ನು ಸಾಮಾನ್ಯವಾಗಿ 'ಪ್ರಮೇಯಗಳು' ಎನ್ನಲಾಗುತ್ತದೆ. ಆ ನಿಟ್ಟಿನಲ್ಲಿಯೇ ಒಬ್ಬ ಲೇಖಕ ಬರವಣಿಗೆಯನ್ನು ಆರಂಭಿಸದಿದ್ದರೂ, ಆತನ ಬರಹಗಳಲ್ಲಿ ಅಲ್ಲಲ್ಲಿ ಸಾಂದರ್ಭಿಕವಾದ ಜೀವನ ಗ್ರಹಿಕೆ, ನಂಬಿಕೆ ಮನೋಧರ್ಮಗಳು ವ್ಯಕ್ತವಾಗುತ್ತವೆ. ಈ ಬಗೆಯ ತೀರ್ಮಾನಗಳನ್ನೇ ಸರಳಾರ್ಥದಲ್ಲಿ ತಾತ್ವಿಕತೆ ಎನ್ನಬಹುದು.

## ಪ್ರಗತಿಶೀಲ ಕಥಾ ಪರಂಪರೆ

ಪ್ರಗತಿಶೀಲ, ನವ್ಯ, ನವ್ಯೋತ್ತರ ಕಾಲಘಟ್ಟದ ಸಣ್ಣಕಥೆಗಳು ನವೋದಯದ ಲಕ್ಷಣಗಳನ್ನು ಒಳಗೊಂಡು ವಸ್ತುವಿನ್ಯಾಸ, ತಂತ್ರ ಶೈಲಿಯಲ್ಲಿ ಸಾಧಿಸಿದ ನಾವೀನ್ಯತೆಯನ್ನು ಕುರಿತು ಚರ್ಚಿಸಲಾಗಿದೆ. ಸಂದ ಚಿತವಾಗಿ ಕನ್ನಡ ಸಣ್ಣಕಥೆಯ ಪ್ರಕಾರಕ್ಕೆ ಹೊಸ ಆಯಾಮಗಳನ್ನು ರೂಪ ವೈವಿಧ್ಯವನ್ನು ತಂದುಕೊಟ್ಟ ಲೇಖಕರ ಕತೆಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ಬಂದಿದೆ. ನಾಲ್ಕು ಹಂತದ ಆಲೋಚನಾ ಕ್ರಮಗಳಲ್ಲಿನ ಕನ್ನಡ ಸಣ್ಣಕತೆಗಳು ಕ್ರಿಯಾಶೀಲಗೊಳ್ಳುತ್ತಾ ಪ್ರಮುಖಧಾರೆಗಳಲ್ಲಿ ಸೇರಿದೆ. ಈ ಹಂತಗಳನ್ನು ಕಾಲಕ್ರಮದಲ್ಲಿ ಒಂದು ಮುಗಿದ ನಂತರ ಇನ್ನೊಂದು ಆರಂಭವಾಯಿತೆಂಬ ಅರ್ಥದಲ್ಲಿ ಭಾವಿಸಲಾಗುವುದಿಲ್ಲ. ಅವುಗಳಿಗೆ ಅದರದೇ ಆದ ಲಕ್ಷಣಗಳಿವೆ. ಆದರು ಅವೆಲ್ಲಾ ಏಕಕಾಲಕ್ಕೆ ಸೀಮಿತವಾಗದೆ ಒಟ್ಟೊಟ್ಟಿಗೇ ಅಸ್ತಿತ್ವದಲ್ಲಿದ್ದವು. ನವೋದಯದ ಕಾಲದ ನಂತರ ಮುಂದಿನ ಹಂತಗಳು ಸಾಗಿಬಂದರೂ ಆ ಲಕ್ಷಣಗಳುಳ್ಳ ಕತೆಗಳು ಇಲ್ಲದಿಲ್ಲ; ಹಾಗೆಯೇ ಬಂಡಾಯದ ಸಂದದಲ್ಲಿ ನವ್ಯ ಕತೆಗಳು ರಚಿತಗೊಂಡಿವೆ; (ಉದಾಹರಣೆಗೆ ಧನಿಯರ ಸತ್ಯನಾರಾಯಣ ಕಥೆ.) ಪ್ರಗತಿಶೀಲ ಚಳುವಳಿ ವಿಧ್ಯುಕ್ತವಾಗಿ ಆರಂಭವಾಗುವ ಮೊದಲೇ ಆ ಲಕ್ಷಣಗಳುಳ್ಳ ಕತೆಗಳು ಬಂದಿದ್ದವು. ಅಲ್ಲದೆ ಹೊಸ ಚಳುವಳಿಗಳ ಪ್ರಭಾವದಿಂದ ಹಳೆಯ ಮಾರ್ಗಗಳಿಗೂ ಹೊಸ ತಿರುವು ದೊರೆತಿರುವ ನಿದರ್ಶನಗಳಿವೆ. ಆದ್ದರಿಂದ ನವೊದಯ ಪ್ರಗತಿಶೀಲ, ನವ್ಯ ಮುಂತಾದ ಶಬ್ದಗಳು ನಿರ್ಧಿಷ್ಟ ಕಾಲಾವಧಿಗಳನ್ನು ಸೂಚಿಸುವುದಕ್ಕಿಂತ ಆಯಾಮಾರ್ಗದ ವಿಶಿಷ್ಟ ಲಕ್ಷಣಗಳನ್ನು ಸೂಚಿಸುತ್ತದೆ ಎನ್ನಬಹುದು. ಅಂದರೆ ನವೋದಯದ ಕತೆಗಳಲ್ಲಿಯೂ ಸಹ ಸಂಘರ್ಷವನ್ನು ಕಾಣಬಹುದಾಗಿದೆ.

**ಪ್ರಗತಿಶೀಲರ ದೃಷ್ಟಿಕೋನಗಳು**

ನವೋದಯ ಮಾರ್ಗ ಆರಂಭವಾದಾಗ ಆ ಕಾಲದ ಕತೆಗಾರರಿಗೆ ಯಾವುದೇ ಬಗೆಯ ಸೈದ್ಧಾಂತಿಕ ನಿಲುವುಗಳಾಗಲಿ, ಬುದ್ಧಿಪೂರ್ವಕ ನಿರ್ಧಾರಗಳಾಗಲಿ ಇರಲಿಲ್ಲ. ಈ ಹಿನ್ನೆಲೆಯನ್ನು ಗಮನಿಸಿದ ಪ್ರಗತಿಶೀಲ ಲೇಖಕರು ನವೋದಯ ಲೇಖಕರ ಧೋರಣೆಗಳಿಗೆ ವಿರುದ್ಧವಾದ ಭಿನ್ನ ಸೈದ್ಧಾಂತಿಕ ನೆಲೆಗಟ್ಟನ್ನು ಅನುಸರಿಸಿದರು. ಸಾಮಾಜಿಕ ವಿಷಮತೆ, ಶೋಷಣೆ, ಅನ್ಯಾಯ-ಇವುಗಳ ಬಗೆಗಿನ ತೀವ್ರ, ಅಸಮಾಧಾನ, ಪರಂಪರಾಗತ ಮೌಲ್ಯಗಳ ಪ್ರಶ್ನಿಸುವಿಕೆ ಮೊದಲಾದ ಆಯಾಮಗಳೊಂದಿಗೆ ಇವರ ಸಾಹಿತ್ಯ ಕೃಷಿ ಸಾಗಿತು. ಅದೇ ವೇಳೆಯಲ್ಲಿ ನವೋದಯ ಸಾಹಿತ್ಯ ನಗರದ, ಸುಶಿಕ್ಷಿತ ಮಧ್ಯಮ ವರ್ಗದ ಹಗಲುಗನಸಿನ ಕಲಾತ್ಮಕ ಅಭಿವ್ಯಕ್ತಿ ಎಂದು ಜರೆದು, ಅದು ಬದುಕಿನ ವಾಸ್ತವತೆಯ ಸ್ಪರ್ಶದಿಂದ ದೂರಾದದ್ದೆಂದು ಆಪಾದಿಸಿದರು. ಲೇಖಕ ತನ್ನ ಸಾಮಾಜಿಕ ಜವಾಬ್ದಾರಿಯನ್ನೇ ಒಪ್ಪಿಕೊಳ್ಳಬೇಕು. ದಲಿತರ ವಾಣಿಯಾಗಬೇಕು. ಭಾರತೀಯ ಸಂಸ್ಕöÈತಿಯ ಹಿಂದಿನ ಮೋಸ ಶೋಷಣೆಗಳನ್ನು ಬಯಲಿಗೆಳೆಯಬೇಕೆಂದು ಪ್ರತಿಪಾದಿಸಿದರು. ಲೇಖಕ ಸಾಮಾಜಿಕ ಕ್ರಾಂತಿಯ ಹರಿಕಾರನಾಗಬೇಕೆಂದು ಸಾರಿದರು.



IJFANS International Journal of Food And Nutritional Sciences Official Publication of International Association of Food and Nutrition Scientists

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

೧೯೪೩ರಲ್ಲಿ ಪ್ರಗತಿಶೀಲ ಲೇಖಕರ ಸಂಘ ರೂಪು ಪಡೆದದ್ದು, ಆದರೆ ಅದಕ್ಕೂ ಮೊದಲೇ ದಲಿತರ ಬಗ್ಗೆ ಅನುಕಂಪ, ಶೋಷಣೆ, ಸಾಮಾಜಿಕ ಅನ್ಯಾಯ – ಇತ್ಯಾದಿಗಳನ್ನು ಕುರಿತ ಕತೆಗಳು ಬಂದಿದ್ದವು. ಕೊರಡ್ಕಲ್ ಶ್ರೀನಿವಾಸ ರಾಯರ "ಧನಿಯರ ಸತ್ಯನಾರಾಯಣ" ಜಯತೀರ್ಥ ರಾಜಪುರೋಹಿತರ 'ಧೂಳು' ಅಂತಹ ಕತೆಗಳಾಗಿವೆ. ವಸ್ತು ತಂತ್ರ ಬಂಧದ ಹಿನ್ನೆಲೆಯಲ್ಲಿಯೂ ಇದೊಂದು ಯಶಸ್ವಿ ಕತೆ. ಕೆಲವೇ ಗಂಟೆಗಳಲ್ಲಿ ನಡೆದ ಒಂದು ಘಟನೆಯ ದೃಶ್ಯವನ್ನು ಯಥಾವತ್ತಾಗಿ ಈ ಕತೆ ಬಿಂಬಿಸುತ್ತದೆ. ಬಸ್ ಪ್ರಯಾಣ, ವಿವಿಧ ಜನರ ಸ್ವಭಾವಗಳ ದರ್ಶನ, ಮುಖಂಡಪ್ಪನ ಚಾಣಾಕ್ಷತನ ಹಾಗೂ ನೈತಿಕ ದಿವಾಳಿತನ, ಬಿಕ್ಷÄಕಿಯ ಅಸಹಾಯಕತೆ ಇವು ಸಶಕ್ತ ಚಿತ್ರಗಳಾಗಿವೆ. ಹಳ್ಳಿಯವನೊಬ್ಬ ಬಾ ತಂಗಿ ಹಣದ ಹೆಸರಿನ ಮ್ಯಾಲೆ ಐಸು ದಿನ ಬದುಕೋಕಾದೀತು. ಬಾ ಎನ್ನುವಲ್ಲಿನ ಸೂಕ್ಷ್ಮತ್ವ ಸಾಂಕೇತಿಕತೆ ಧ್ವನಿ ಪೂರ್ಣವಾಗಿದೆ. ಆ ನೆಲೆಯಲ್ಲಿ ಇದೊಂದು ಸತ್ವಪೂರ್ಣ ಕತೆಯಾಗಿದೆ. ಸ್ವತಂತ್ರೋತ್ತರ ಭಾರತದ ಬಗೆಗಿನ ಆಸಕ್ತಿ, ಕಾಳಜಿಗಳು ಈ ರಚನೆಯ ಹಿಂದಿರುವುದನ್ನು ಗುರುತಿಸಬಹುದು. ಪ್ರಗತಿಶೀಲ ಕತೆಗಳಲ್ಲಿನಂತೆ ಇಲ್ಲಿಯೂ ಕೂಡ ಶ್ರೀಮಂತಿಕೆಯ ಹೃದಯ ಹೀನತೆ ಮತ್ತು ಬಡತನದ ಮುಗ್ಧತೆಗಳ ನಡುವೆ ವೈದೃಶ್ಯವೇ ಇದೆ. ಆದರೆ ಈ ವೈದ್ಯಶ್ಯ ಸಾಕಷ್ಟು ಸೂಕ್ಷ್ಮ÷ತ್ವವೂ, ಶಕ್ತಿಯುತವೂ ಆಗಿದ್ದು; ಸಂಯಮದ ಬರವಣಿಗೆ ಮೂಲಕ ತನ್ನ ಉದ್ದಿಷ್ಟ ಪರಿಣಾಮವನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ.(ಎಸ್.ಪ್ರಸಾದಸ್ವಾಮಿ,) ಎಂದು ಹೇಳಬಹುದಾಗಿದೆ.

## ಪ್ರಗತಿಶೀಲ ಸಾಹಿತ್ಯ ಕಥನಕ್ರಮ

ಆಧುನಿಕ ಕನ್ನಡ ಕಥಾಸಾಹಿತ್ಯ ಇತಿಹಾಸವನ್ನು ತನ್ನ ವಸಾಹತುಶಾಹಿ ಬಿಡುಗಡೆಗಾಗಿ ಬಳಸಿಕೊಂಡಿದೆ. ಇದು ಗುಲಾಮಗಿರಿಯ ಬಿಡುಗಡೆಗಾಗಿಯೇ ಜಗತ್ತಿನ ಬಹುತೇಕ ರಾಷ್ಟ್ರಗಳ ಸಾಹಿತ್ಯದಲ್ಲಿ ಮೂಡಿರುವುದು. ಕನ್ನಡ ನವೋದಯ ಪೂರ್ವ ಮತ್ತು ನವೋದಯ ಕಾಲದಲ್ಲಿ ಚರಿತ್ರೆ ಇಂಥ ಒಂದು ಅನಿವಾರ್ಯ ಕಾರಣಗಳಿಂದಾಗಿ ಬಳಕೆಯಾಯಿತೆಂದು ಹೇಳುವ ಧೈರ್ಯವನ್ನು ನಾವು ಮಾಡಬಹುದಾದರೂ ಪ್ರಗತಿಶೀಲ ಸಾಹಿತ್ಯದಲ್ಲಿ ಚರಿತ್ರೆಯ ಸಂಗತಿಗಳು ಕಥಾನಕದ ಕ್ರಮವಾಗಲು ಕಾರಣಗಳೇನು? ಎಂಬ ಪ್ರಶ್ನೆಗೆ ಉತ್ತರವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಆ ಸಾಹಿತ್ಯ ನಿರಂಜನರನ್ನೊಬ್ಬರನ್ನು ಹೊರತುಪಡಿಸಿ, ಉಳಿದವರನ್ನು ಕಳಪೆಯಾಯಿತೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಸಾಹಿತ್ಯ ಎಲ್ಲಿಯವರೆಗೆ ಜನಮುಖಿ ನಿಲುವುಗಳನ್ನು ಪ್ರತಿಪಾದಿಸಲು ಸೋಲುತ್ತದೆ ಅಲ್ಲಿಯವರೆಗೆ ಅದು ತಾನು ಯಾವುದೇ ವಸ್ತುವನ್ನು ಸ್ವೀಕರಿಸಿ ಬೆಳೆಯಲು ತೊಡಗಿದರೂ ಸೋಲುತ್ತದೆನ್ನುವುದಕ್ಕೆ ಅ.ನ.ಕೃ, ತ.ರಾ.ಸು. ಅವರ ಕಾದಂಬರಿಗಳೇ ಸಾಕ್ಷಿಯಾಗಿವೆ.( ಸಿ.ಬಿ.ಹೊನ್ನು ಸಿದ್ದಾರ್ಥ)



IJFANS
International Journal of
Food And Nutritional Sciences
Official Publication of International Association of Food and Nutrition Scientists

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ಪ್ರಗತಿಶೀಲರು ಸಾಹಿತ್ಯವನ್ನು ಸಾಮಾಜಿಕ ನೆಲೆಯಿಂದ ಚಿತ್ರಿಸಹೊರಟು, ಆ ನೆಲೆಗಳನ್ನು ಎಷ್ಟರಮಟ್ಟಿಗೆ ಸಾಧಿಸಿದರು ಎಂಬ ಪ್ರಶ್ನೆ ನಮಗೆ ಮುಖ್ಯವಾಗಿ ಎದುರಾಗುತ್ತದೆ. ಈ ಕಾರಣಕ್ಕಾಗಿಯೇ ಪ್ರಗತಿಶೀಲ ಸಾಹಿತಿಗಳು ಚರಿತ್ರೆಯನ್ನು ಎರಡುಬಗೆಯಲ್ಲಿ ಬಳಸಿಕೊಳ್ಳತೊಡಗಿದರು. ಇಂಥ ಬಳಕೆ ನವೋದಯದವರ ಸುಧಾರಣಾವಾದಿಯಾಗುವ ಬದಲು ಪುನರುತ್ಥಾನದ ಆಶಯಗಳನ್ನು ಹೊಂದಿದಂತೆ ಕಾಣುತ್ತದೆ. ಈ ಮಾತು ನಿರಂಜನರ ಸಾಹಿತ್ಯಕ್ಕೆ ಅನ್ವಯವಾಗುವುದಿಲ್ಲ. ಏಕೆಂದರೆ ಅವರ ಚಿರಸ್ಮರಣೆ, ಸ್ವಾಮಿ ಅಪರಾಂಪರ, ಕಲ್ಯಾಣಸ್ವಾಮಿ, ಮೃತ್ಯುಂಜಯ ಕಾದಂಬರಿಗಳು ಬಿಟ್ಟುಕೊಡುವ ಜೀವನದರ್ಶನ ನಮಗೆ ಚರಿತ್ರೆಯ ವಾಸ್ತವಾಂಶಗಳನ್ನು ತಿಳಿಸುತ್ತಲೇ ಸಾಹಿತ್ಯ ಕೃತಿಗಳೂ ಆಗಿರುವುದರಿಂದ ಅವರ ಚರಿತ್ರೆಯ ಕಥಾನಕಗಳಿಗೆ ನಮ್ಮ ಸಾಹಿತ್ಯದಲ್ಲಿ ಒಂದು ಪ್ರತ್ಯೇಕ ಸ್ಥಾನ ದೊರಕಿರುವಂತೆ ಕಾಣುತ್ತದೆ. ಇದಕ್ಕೆ ಮುಖ್ಯ ಕಾರಣ ಅವರಲ್ಲಿ ತಾವು ನಂಬಿದ್ದ ಸಾಮಾಜಿಕ ಬದ್ಧತೆ ಒಂದು ಮಾನವೀಯ ನೆಲೆಯಲ್ಲಿ ಪ್ರಕಟವಾಗಿದೆಯೇ ಹೊರತು, ಉದೆಕಿತ ನೆಲೆಯಲ್ಲಿ ಅಲ್ಲ. ಆದರೆ ಬಸವರಾಜ ಕಟ್ಟೀಮನಿಯವರ ಸಾಹಿತ್ಯ ನಿರಂಜನರ ಕೃತಿಗಳಿಗಿಂತ ರೋಚಕ ನೆಲೆಯಲ್ಲಿ ಅಭಿವ್ಯಕ್ತಗೊಂಡರೂ ಅದು ತನ್ನ ಭಾಷೆ ಮತ್ತು ಭಾವಗಳ ಸಾಚಾತನದಿಂದ ಅಲ್ಲಲ್ಲಿ ಗೆದ್ದಂತೆಯೂ, ಸೋತಂತೆಯೂ ಕಾಣುತ್ತದೆ. ಇವರು ನಿರಂಜನರ ಹಾಗೆ ಒಂದು ಶುದ್ಧ ಚರಿತ್ರೆಯ ಮಾದರಿಗಳನ್ನು ಸಾಹಿತ್ಯ ಕೃತಿಯನ್ನಾಗಿ ಮಾಡುವುದಕ್ಕಿಂತಲೂ ತಮ್ಮ ಹರಿತವಾದ ಭಾಷೆಯಲ್ಲಿ ಯುದ್ಧಸನ್ನದ್ಧ ಸ್ಥಿತಿಯನ್ನೇ ತಮ್ಮ ಕೃತಿಗಳಲ್ಲಿ ತರಲಿಚ್ಛಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಪ್ರಗತಿಶೀಲರು ಚರಿತ್ರೆಯ ಸಂಗತಿಗಳನ್ನು ಗ್ರಹಿಸುತ್ತಾರೆ ಮತ್ತು ಚಿತ್ರಿಸುತ್ತಾರೆ. ಆದರೆ ಅವರ ರೋಚಕರೇಚಕ ಕ್ರಿಯೆಯಾಗಿ ವಸ್ತುವಿನ ಗಂಭೀರತೆಗಿಂತ ದಿಢೀರನೆಯ ಬದಲಾವಣೆಯ ಸಾಧ್ಯತೆಗಳನ್ನು ಪುರಸ್ಕರಿಸಿದಂತಾಗುತ್ತದೆ. ಅವರ ಸಾಹಿತ್ಯದಲ್ಲಿ ಕಾಣಸಿಗುವ ಸಮಾಜದಲ್ಲಿನ ಅಸಮಾನತೆಯ ಬಗ್ಗೆ ತಾತ್ವಿಕವಾದ ಅಸಮಾಧಾನಕ್ಕಿಂತ ಸ್ವಯಂ ಆರೋಪಿಸಿಕೊಂಡ ಅಸಮಾಧಾನ ಮಾತ್ರ ಓದುಗರ ಗಮನದಲ್ಲಿಟ್ಟುಕೊಂಡದ್ದರಿಂದ ಚರಿತ್ರೆಯ ಸಂಗತಿಗಳು ತಾತ್ವಿಕ ಕಾರಣಗಳಿಂದಾಗಿ ಬರೆದ ಸಮಾಜ ಮೇಲ್ನೋಟದ ಗ್ರಹಿಕೆಗಾಗಿ ಬರುತ್ತವೆ.

**ಕಾದಂಬರಿಯ ವೈಶಿಷ್ಟ್ಯಯತೆ**

ಕಾದಂಬರಿ ಸಾಹಿತ್ಯ ಪ್ರಕಾರವು ಒಂದು ರೀತಿಯಿಂದ ಜಾನಪದ ಸಾಹಿತ್ಯದಂತೆ, ಸಾಮಾನ್ಯ ಜನರ ಆಶೋತ್ತರಗಳನ್ನು ಅಭಿರುಚಿಗಳನ್ನು ಸಂಸ್ಕöÈತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಇದು ನಾಟಕದಂತೆ ಇದು ಪರಿಪೂರ್ಣತೆಯನ್ನು ಮುಟ್ಟಿದ ರೂಪವಾಗಿರದೆ, ಇನ್ನೂ ಬೆಳವಣಿಗೆಯನ್ನು

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002**

ಪಡೆಯುತ್ತಲಿದೆ. ಇನ್ನೊಂದು ರೀತಿಯಿಂದ ನೋಡಿದಾಗ ಇದು ಒಬ್ಬ ಲೇಖಕನದೇ ಕೃತಿಯಾಗಿರುವುದರಿಂದ ಶೈಲಿ ಹಾಗೂ ಆವಿಷ್ಕಾರಗಳ ವೈಶಿಷ್ಟ್ಯವನ್ನು ಪಡೆದಿದೆ. "ಮಹಾಕಾವ್ಯ ಒಂದು ಕಾಲಕ್ಕೆ ತನ್ನ ಉದ್ದೇಶವನ್ನು ಸಾಧಿಸಿ ಐತಿಹಾಸಿಕವಾಗಿ ಮಾತ್ರ ಬದುಕಿರುವ ಸಾಹಿತ್ಯ ಪ್ರಕಾರವಾದರೆ, ಕಾದಂಬರಿ, ಸಮಕಾಲೀನ ಜೀವನಕ್ಕೆ ತೀರ ಯೋಗ್ಯವಾದ ರೂಪವಾಗಿದೆ. ಒಂದು ಸಾಹಿತ್ಯಲೋಕದ ಆ ತುದಿಯಾದರೆ ಇನ್ನೊಂದು ಈ ತುದಿ."(ಕೀರ್ತಿನಾಥ ಕುರ್ತಕೋಟಿ,)

"ಸಂಧ್ಯಾರಾಗ' ಅ.ನ.ಕೃ. ಅವರ ಪ್ರಾತಿನಿಧಿಕ ಕಾದಂಬರಿಯಾಗಿದೆ. ಅವರ ರೀತಿಯಲ್ಲಿಯ ಒಳಿತು ಕೆಡಕುಗಳೆರಡನ್ನು ಇಲ್ಲಿ ಕಾಣಬಹುದಾಗಿದೆ. "ಸಂಗೀತಗಾರನೊಬ್ಬನ ಜೀವನ ಈ ಕಾದಂಬರಿಗೆ ವಸ್ತುವಾಗಿದೆ. ಲಕ್ಷ್ಮಣನ ಕಲಾಜೀವನದೊಂದಿಗೆ, ಅವನ ಸುತ್ತಲಿನ ಜೀವನದ ಪ್ರತಿಕ್ರಿಯೆಗಳನ್ನು ಚಿತ್ರಿಸುವುದು ಈ ಕಾದಂಬರಿಯ ಉದ್ದೇಶವಾಗಿದೆ. ಆದರೆ ತೀವ್ರ ಭಾವನಾವಶತೆಯ ಪರಿಣಾಮವಾಗಿ ಈ ಎರಡೂ ಉದ್ದೇಶಗಳು ಸಾಧಿಸದಂತಾಗಿವೆ. ಲಕ್ಷ್ಮಣನ ವ್ಯಕ್ತಿತ್ವದ ಘನತೆಗೆ ವಾಸ್ತವತೆಯ ತಳಹದಿ ದೊರೆತಿಲ್ಲ. ಅವನಿಗೆ ದುಃಖಗಳೆಲ್ಲ ಬೇರೆ ಕ್ಷೇತ್ರದಿಂದ ಬರುತ್ತವೆಯೇ ಹೊರತು, ಅವನ ಕಲೆ ನಿರಾತಂಕವಾಗಿದೆ. ಅವನ ಒಂದಾದರೂ ಸಂಗೀತ ಕಛೇರಿ ವಿಫಲವಾಗುವುದಿಲ್ಲ. ಇದೇ ಮಾತು ಉಳಿದ ಆದರ್ಶಪಾತ್ರಗಳಿಗೂ ಅನ್ವಯಿಸುತ್ತದೆ. ಮೀನಾಕ್ಷಮ್ಮನವರು ಹಾಲಳ್ಳಿಗೆ ಬಂದಾಗ ಅವರಿಗೆ ಸಲ್ಲುವ ಗೌರವ, ಶ್ರೀನಿವಾಸರಾಯರ ಮರಣ, ಶ್ಯಾಮಣ್ಣನವರ ಗೃಹತ್ಯಾಗ, ಜಯ, ಶಾಂತಾ ಇವರ ಸಹಜಶೀಲತೆ, ರಾಮನ ಕ್ರೌರ್ಯ, ಹಾಡುತ್ತಿದ್ದಂತೆಯೇ ಕೊನೆಗೊಳ್ಳುವ ಲಕ್ಷ್ಮಣನ ಕಲಾಜೀವನ ಇವೆಲ್ಲ ಚಿತ್ರಗಳಲ್ಲಿ ಭಾವನಾವಶತೆಯ ಬಣ್ಣ ಹೆಚ್ಚಾಗಿದೆ. ಪಾತ್ರರಚನೆಯಲ್ಲಿಯೂ ಇದೇ ಬಗೆಯ ಸುಲಭತೆಯನ್ನು ಕಾಣಬಹುದಾಗಿದೆ. ಇಲ್ಲಿಯ ಪಾತ್ರಗಳು ಕೆಲವು ಗುಣಗಳ ಪ್ರತಿನಿಧಿಗಳಾಗಿರುವುದರಿಂದ ಆ ಮಟ್ಟಿಗೆ ತಮ್ಮ ಕೆಲಸ ಮಾಡಿ ಕೈತೊಳೆದುಕೊಳ್ಳುತ್ತವೆ. ಅತಿ ಆದರ್ಶವಾದಿತ್ವ ಸಕ್ಕರೆಯ ಪಾಕದಂತೆ ಮೆತ್ತಿಕೊಂಡಿರುವುದರಿಂದ ಈ ಪಾತ್ರಗಳನ್ನು ಕನಸಿನಲ್ಲಿಯಂತೆ ವರ್ತಿಸುತ್ತವೆ. ಬಹುಶಃ ಈ ಗುಣವೇ ಕಾದಂಬರಿಯ ಲೋಕಪ್ರಿಯತೆಗೆ ಕಾರಣವಾಯಿತು."(ಕೀರ್ತಿನಾಥ ಕುರ್ತಕೋಟಿ,)

ಈ ಕಾದಂಬರಿಯ ಒಳ್ಳೆಯ ಗುಣ ಅದರ ಬಂಧದಲ್ಲದೆ ಮೊಟ್ಟಮೊದಲಿಗೆ ಕಥೆಯ ಎಲ್ಲ ಸೂತ್ರಗಳೂ ಒಮ್ಮುಖವಾಗಿ ಸಾಗಿರುವ ಕಾದಂಬರಿಯೆಂದರೆ ಇದೇ ಎಂದು ಹೇಳಬಹುದು. ಉಪಕಥೆಗಳ ಗೊಂದಲವಿಲ್ಲದ ಒಂದೇ ಕತೆ ತನ್ನ ಎಲ್ಲ ಅಂಗಗಳೊಂದಿಗೆ ಪರಿಪೂರ್ಣವಾಗಿ, ಪ್ರಾರಂಭದಿಂದ ಮುಗಿತಾಯದವರೆಗೂ ಭಾವಗೀತದಂತೆ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ಮೂಡಿಬಂದಿದೆ. ಈ ಗುಣಕ್ಕೆ ಒಪ್ಪಹಾಕಿದಂತೆ ಅ.ನ.ಕೃ. ಅವರ ಲಲಿತಶೈಲಿ ಕಾದಂಬರಿಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಹಿತಮಿತವಾದ ವರ್ಣನೆಗಳು, ಚತುರವಾದ ಸಂಭಾಷಣೆ, ಕತೆಯ ತೀವ್ರವಾದ ಓಟ ಈ ಗುಣಗಳೆಲ್ಲ ಕತೆಯನ್ನು ಓದುಗರಿಗೆ ಆತ್ಮೀಯವನ್ನಾಗಿ ಮಾಡಲು ಸಹಾಯಕಾರಿಯಾಗುತ್ತವೆ. ಅ.ನ.ಕೃ. ಶೈಲಿಯ ಮಾದಕತೆ ಓದುಗನನ್ನು ಬೇರೆ ವಿಷಯಗಳ ಬಗ್ಗೆ ಚಿಂತಿಸದಂತೆ ಮಾಡಬಲ್ಲದು.

## ಕಾದಂಬರಿಯಲ್ಲಿ ವೈಚಾರಿಕತೆ

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕಾದಂಬರಿಯೇ ವೈಚಾರಿಕತೆಯ ಅಭಿವ್ಯಕ್ತಿಗೆ ಹೆಚ್ಚು ಅನುಕೂಲಕರವಾದ ಮಾಧ್ಯಮವೆಂದು ಹೇಳಬಹುದು. ಲಯನೆಲ್ ಟ್ರೈಲಿಂಗ್ ಇದನ್ನು "ನೈತಿಕ ಕಲ್ಪಕತೆಯ ನಮ್ಮ ಕಾಲದ ಅತ್ಯಂತ ಪ್ರಭಾವಿ ಮಾಧ್ಯಮ"ವೆಂದು ಕರೆದಿದ್ದಾನೆ. ಡಿ.ಎಚ್.ಲಾರೆನ್ಸ್ "ಕಾದಂಬರಿ ಜೀವನದ ಏಕೈಕ ಉಜ್ವಲ ಪುಸ್ತಕ"೨೪ ಎನ್ನುತ್ತಾನೆ. ಕಾವ್ಯದಲ್ಲಿ ಸಂವೇದನೆಯ ಮಟ್ಟದಲ್ಲಿ ಮಾತ್ರ ವೈಚಾರಿಕತೆ ಬರಬಹುದು ಆಗಲೂ ಪ್ರತಿಯೊಂದು ವಿಚಾರವೂ ಪ್ರತಿಮೆಯಾಗಿ, ಚಿತ್ರವಾಗಿ ಸಂಕೇತವಾಗಿ ಇಡಿಯ ಕವಿತೆಯ ಬಂಧದಲ್ಲಿ ಒಂದು ಅನಿವಾರ್ಯ ಕೊಂಡಿಯಾಗಿ ಬರಬೇಕಾಗುತ್ತದೆ. ಇಲ್ಲವೆ ಇಡಿಯ ಬಂದದ ಹಿಂದಿನ ಚಾಲಕ ಶಕ್ತಿಯಾಗಿರಬೇಕಾಗಿರುತ್ತದೆ. ಬಹುಪಾಲು ಲೇಖಕರ ಪಾಲಿಗೆ ಇದೊಂದು ಅಗ್ನಿ ದಿವ್ಯವೇ ಆಗಿದೆ. ಅಂತೆಯೇ ಹೆಚ್ಚು ಜನ ವೈಚಾರಿಕ ಲೇಖಕರ ಪಾಲಿಗೆ ಕಾವ್ಯದ ಮಾರ್ಗ ಮುಚ್ಚಿದ ಬಾಗಿಲಾಗಿದೆ. ನಾಟಕದಲ್ಲಿಯೂ ಲೇಖಕನ ವೈಯಕ್ತಿಕ ವೈಚಾರಿಕತೆಯ ಆವಿಷ್ಕಾರಕ್ಕೆ ಅಷ್ಟೊಂದು ಅವಕಾಶವಿಲ್ಲ. ನಾಟಕಕ್ಕೆ ಅನಿರ್ವಾಯವಾದ ವಸ್ತುನಿಷ್ಠತೆ ಲೇಖಕನ ಮೇಲೆ ಉಗ್ರವಾದ ನಿರ್ಬಂಧಗಳನ್ನು ಹೇರುತ್ತದೆ. ಅಲ್ಲದೆ ವೈಚಾರಿಕತೆ ನಾಟಕದಲ್ಲಿ ಪಾತ್ರಗಳ ಮಾತಿನಲ್ಲೇ ಬರಬೇಕಾಗಿರುವುದರಿಂದ ಎಷ್ಟೋ ಸಲ ಮಾತಿನಲ್ಲಿ ಆಡಿ ತೋರಿಸಲಾಗದ ವಿಚಾರಗಳು ಪಾತ ್ರಗಳ ಬಾಯಲ್ಲಿ ಬಂದು ಇಡೀಯ ವಾತಾವರಣವೇ ಕೃತಕತೆಯಿಂದ ತತ್ತರಿಸಿ ಬಿಡಬಹುದು. ಹಾಗಿಲ್ಲದೆ ಇಡಿಯ ನಾಟ್ಯ ಬಂಧದ ಕೇಂದ್ರ ಶಕ್ತಿಯಾಗಿ ವೈಚಾರಿಕತೆ ಕೆಲಸ ಮಾಡಿದಾಗ ಮಾತ್ರ ಅದು ಯಶಸ್ವಿಯಾಗಬಲ್ಲದು. ಕಾದಂಬರಿ ಈ ಎರಡು ಸಾಹಿತ್ಯ ಪ್ರಕಾರಗಳಿಗಿಂತಲೂ ಹೆಚ್ಚು ವಿಕಸನ ಶೀಲವಾದದ್ದು. ಪರ್ಸಿ ಲಬಕ್‌ನಂಥ ವಿಮರ್ಶಕರು ಮತ್ತು ಹೆನ್ರಿ ಜೇಮ್ಸ್‌ನಂಥ ಪ್ರಯತ್ನಪಟ್ಟಿದ್ದರೂ, ಕಾದಂಬರಿಕಾರರು ಇದನ್ನು ಕಲೆಯ ಕಠೋರ ಶಿಸ್ತಿಗೆ ಒಳಪಡಿಸಲು ಎಷ್ಟೇ ಕಾದಂಬರಿ ಮೂಲತಃ ಸಾಹಿತ್ಯಕ ಪ್ರಕಾರಗಳಲ್ಲೆಲ್ಲ ಅತ್ಯಂತ ಸಡಿಲವಾದದ್ದಾಗಿಯೇ ಉಳಿದಿದೆ. ಕೊನೆಗೂ ಹೆನ್ರಿ ಜೇಮ್ಸ್ ಕಾದಂಬರಿಯನ್ನು "ಸಾಹಿತ್ಯ ಪ್ರಕಾರಗಳಲ್ಲೆಲ್ಲ ಅತ್ಯಂತ ಸ್ವತಂತ್ರವಾದದ್ದು ಅತ್ಯಂತ ಸ್ಥಿತಿಸ್ಥಾಪಕ ಗುಣವುಳ್ಳದ್ದು, ಅತ್ಯಂತ ಪ್ರಚಂಡವಾದದ್ದು" ಎಂದು ಒಪ್ಪಿಕೊಳ್ಳುತ್ತಾನೆ.

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ಇದಕ್ಕೆ ಬಹುಶಃ ಆಂಗ್ಲ ಮೂಲದಲ್ಲಿ ಕಾದಂಬರಿ ಹದಿನೆಂಟನೇ ಶತಮಾನದ ಲಲಿತ ಪ್ರಬಂಧಗಳಲ್ಲಿ ಅನುಷಂಗಿಕವಾಗಿ ಹುಟ್ಟಿಕೊಂಡದ್ದೂ ಒಂದು ಕಾರಣವಾಗಿರಬಹುದು.

ಕಾದಂಬರಿ ಎಂದರೆ ವರದಿಯೂ ಅಲ್ಲ; ಗೈಡೂ ಅಲ್ಲ; ಕಾದಂಬರಿಕಾರ ತಾನು ಆರಿಸಿಕೊಂಡ ಪ್ರಪಂಚದಿಂದ ಹುಡುಕಿ ಮೂಡಿಸುವ ಜೀವನದೃಷ್ಟಿ. ಹೀಗೆ ತಿಳಿದಾಗ ಮಾತ್ರ ನಮ್ಮ ಕಾದಂಬರಿಗೆ ಆಶಾದಾಯಕ ಭವಿಷ್ಯ ಸಾಧ್ಯ.

ಒಟ್ಟಾರೆಯಾಗಿ ಹೇಳುವುದಾದರೆ ಕಾದಂಬರಿ ಎಂದರೆ ಸಮಾಜದ ನಾನಾ ಸಮಸ್ಯೆಗಳನ್ನು ಸುದೀರ್ಘವಾಗಿ ಚರ್ಚೆ ಮಾಡುವುದು ಎಂದರ್ಥ. ಅಂತಹ ಸಮಸ್ಯೆಗಳಿಗೆ ಸಾಧ್ಯವಾದಷ್ಟು ಪರಿಹಾರವನ್ನು ಕಂಡುಕೊಳ್ಳುವುದು ಕೂಡ. ಕಾದಂಬರಿ ಲೋಕ ಪ್ರಸ್ತುತ ಘಟ್ಟದಲ್ಲೂ ಹೆಚ್ಚುಹೆಚ್ಚಾಗಿ ಮೂಡಿಬರಬೇಕು. ಆ ಮುಖಾಂತರ ಓದುಗರಿಗೆ ತಲುಪಬೇಕು, ವೈಚಾರಿಕ, ವೈಜ್ಞಾನಿಕ, ಪ್ರಾಯೋಗಿಕ ಅಂಶಗಳು ಕ್ರಿಯಾತ್ಮಕವಾಗಬೇಕೆಂಬುದು ಇದರ ಆಶಯವಾಗಿದೆ. ಕಾದಂಬರಿ ನೋಡುವುದು ಇಡಿಯಾದ ಜೀವನವನ್ನು ಕಥೆ ನೋಡುವುದು ಜೀವನದ ರಸ ನಿಮಿಷಗಳನ್ನು ಮಾತ್ರ ಸಣ್ಣ ಕತೆಯಲ್ಲಿ ಕಾಣುತ್ತೇವೆ.

**ಉಪಸಂಹಾರ**

ಪ್ರಗತಿಶೀಲ ಎನ್ನುವುದು 'ಮುಂದೆ ಹೋಗುವುದು', ಇರುವ ಸ್ಥಿತಿಯಿಂದ ಬದಲಾವಣೆಯನ್ನು ಬಯಸುವುದು. ನಾವು ಯಾವುದೇ ಕ್ಷೇತ್ರದಲ್ಲಿ ಗಮನಿಸಿದರೂ ಪ್ರಗತಿ ಎಂಬ ಅಂಶ ಕಂಡುಬರುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಸಾಮಾಜಿಕ ಪರಿವರ್ತನೆಯನ್ನು ಕುರಿತಂತೆ ನೋಡುವುದಾದರೆ ಪ್ರಗತಿ ಹಾಗೂ ಪ್ರಗತಿಶೀಲ ಮನೋಭಾವ ಸಾಹಿತ್ಯ ಚಳುವಳಿಯಲ್ಲಿ ಅಂತರ್ಗತಗೊಂಡಿದೆ. ಬದಲಾವಣೆ ಜೀವಂತಿಕೆಯ ಲಕ್ಷಣ ಕೂಡ. ಮಾರ್ಕ್ಸ್‌ವಾದವು ಪ್ರಗತಿಶೀಲ ಸಾಹಿತ್ಯಕ್ಕೆ ಹೇಗೆ ಪ್ರೇರಣೆ ಪಡೆದಿದೆ. ಕಾರ್ಲ್‌ಮಾರ್ಕ್ಸ್‌ನ ಪ್ರತಿಪಾದಿಸಿದ ತತ್ವಪ್ರಣಾಲಿಗಳು ಕಾರ್ಮಿಕರಿಗೆ ನೀಡುವ ಮುನ್ನೆಚರಿಕೆಯ ಮಾತುಗಳು ಬಂಡವಾಳಗಾರರ ಮತ್ತು ಕೂಲಿಕಾರ್ಮಿಕರ ನಡುವಿನ ವ್ಯತ್ಯಾಸಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದ್ದು ಅಲ್ಲದೆ ಇಂದಿನ ಮಾರ್ಕ್ಸ್‌ವಾದ, ಸಮಾಜವಾದಗಳ ಜೊತೆಗೆ ನಮ್ಮ ಸಂವಿಧಾನದಲ್ಲಿನ ಸಮಾಜವಾದ ಅಂಶಗಳನ್ನು ಚರ್ಚಿಸಲಾಗಿದೆ.

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 9, Issu 2, 2002

ಸಂಘರ್ಷವು ಇರುವ ನೆಲೆಯಿಂದ ಬದಲಾವಣೆಯ ನೆಲೆಗೆ ತಲುಪಲು ತೊಡಗಿಕೊಳ್ಳುವ ಒಂದು ಪ್ರಕ್ರಮವಾಗಿದೆ. ಅಲ್ಲಮಪ್ರಭುವಿನ 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದ ಹೆಜ್ಜೆಯನರಿಯಬಾರದು' ಎಂಬಂತೆ ಪ್ರಗತಿಶೀಲ ಸಾಹಿತ್ಯವನ್ನು ಮರೆಯಬಾರದು. ಎಲ್ಲಾ ಕಾದಂಬರಿಕಾರರೂ ನವ ಸಮಾಜವನ್ನು ನಿರ್ಮಾಣಮಾಡಲು ಅರಿಯಬೇಕಾದ ಮಾದರಿಗಳನ್ನು ತಮ್ಮ ತಮ್ಮ ಕಾದಂಬರಿಗಳಲ್ಲಿ ಕತೆಗಳಲ್ಲಿ ಸೂಚಿಸಿದ್ದಾರೆ. ಸಮಾಜದಲ್ಲಿ ಗೋಮುಖ ವ್ಯಾಘ್ರಗಳ ಮುಖವಾಡವನ್ನು ಕಳಚುವ ಪ್ರಯತ್ನವನ್ನು ಪ್ರಗತಿಶೀಲ ಸಾಹಿತ್ಯದ ಲೇಖಕರು ಮಾಡಲು ಪ್ರಯತ್ನಿಸಿದ್ದಾರೆ ಎಂದರೆ ತಪ್ಪಾಗಲಾರದು.

**ಪರಮಾರ್ಶನಗ್ರಂಥಗಳು**


1. ನರಹಳ್ಳಿ ಬಾಲಸುಬ್ರಹ್ಮಣ್ಯ, ಅ.ನ.ಕೃ. ಮತ್ತು ಕನ್ನಡ ಸಂಸ್ಕೃತಿ ಅಂಕಿತ ಪುಸ್ತಕ ಬೆಂಗಳೂರು.೨೦೦೬
2. ಸಿ.ಬಿ ಹೊನ್ನುಸಿದ್ದಾರ್ಥ. ಆಧುನಿಕ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಸಂ-೨, ೨೦೧೪.
3. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ : ಕಾದಂಬರಿ ಸ್ವಪ್ನ ಬುಕ್ ಹೌಸ್, ಬೆಂಗಳೂರು
4. ಜಿ.ಎಸ್.ಶಿವರುದ್ರಪ್ಪ, ಕನ್ನಡದ ಕೆಲವು ಪ್ರಮುಖ ಕಾದಂಬರಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೦.
5. ಬಿ.ಎಸ್.ಗೀತಾ, ಕರ್ನಾಟಕ ಸಾಂಸ್ಕೃತಿಕ ಸಂಘರ್ಷ – ಒಂದು ಅಧ್ಯಯನ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. .೨೦೦೮